ಅ) ಶಿವಮೊಗ್ಗ ನಗರಸಭೆಗೆ ಕಳೆದ ಐದು ವರ್ಷಗಳಲ್ಲಿ ವರ್ಷವೊಂದಕ್ಕೆ ಎಷ್ಟರಂತೆ ಅಭಿವೃದ್ಧಿ ನಿಧಿಯನ್ನು ಕೊಡಲಾಗಿದೆ?

ಇ) ಈ ಇಲ್ಲಿನ ಜನಸಂಖ್ಯೆ ಮತ್ತು ವಿಸ್ತೀರ್ಣದ ದೃಷ್ಟಿಯಿಂದ ಸಮಂಜಸವಾಗಿದೆಯೇ?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಕರ್ನಾಟಕ ಹೈದರಾಬಾದ್ ಅಭಿವೃದ್ಧಿ ಮಂಡಳಿ ಸಚಿವರು).

ಅ) ಪುರಸಭೆಯ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಕುಡಿಯುವ ನೀರಿನ ಅಭಾವ ಪರಿಹಾರ, ರಸ್ತೆಗಳ ದುರಸ್ತಿಗಾಗಿ ಅಭಿವೃದ್ಧಿ ಅನುದಾನವನ್ನು ಬಿಡುಗಡೆ ಮಾಡಲಾಗುವುದು.

ಆ)		ಲಕ್ಷಗಳಲ್ಲಿ
	90-91	1.00
	91-92	4.00
	92-93	2.00
	93-94	
	94-95	ಇಲ್ಲಾ.

ಇ) ಅಭಿವೃದ್ಧಿ ಅನುದಾನವನ್ನು ವಿಸ್ತೀರ್ಣ ಮತ್ತು ಜನಸಂಖ್ಯಾ ಆಧಾರದ ಮೇಲೆ ಬಿಡುಗಡೆ ಮಾಡಲಾಗುವುದಿಲ್ಲ. ಕ್ರಮಸಂಖ್ಯೆ ೧ ರಲ್ಲಿ ಉತ್ತರಿಸುವ ಆಧಾರದ ಮೇಲೆ ಬಿಡುಗಡೆ ಮಾಡಲಾಗುವುದು.

೧೯೯೪-೯೫ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಗಾಗಿ ಒದಗಿಸಿರುವ ಅಯವ್ಯಯದ ಮೊತ್ತ.

೫೭೩ - ಶ್ರೀ ಅಯನೂರು ಮಂಜುನಾಥ (ಹೊಸನಗರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೯೪-೯೫ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ಕಲ್ಯಾಣ ಕಾರ್ಯಕ್ರಮಗಳಿಗಾಗಿ ನಿಗದಿಪಡಿಸಿದ್ದ ಒಟ್ಟು ಮೊತ್ತವೆಷ್ಟು.

ಆ) ಸದರಿ ಮೊತ್ತವನ್ನು ಸಂಪೂರ್ಣವಾಗಿ ನಿಗದಿತ ಕಾರ್ಯಕ್ರಮಗಳಿಗೆ ವಿನಿಯೋಗಿಸಲಾಗಿದೆಯೇ

ಇ) ಹಾಗಿಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ೧೯೯೪-೯೫ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳಿಗೆ ಒದಗಿಸಲಾದ ಹಣದ ವಿವರವನ್ನು ಈ ಕೆಳಗೆ ತೋರಿಸಿದೆ:-

೧.	ಯೋಜನೆ	೧೦೦,೨೯,೨೨	ಲಕ್ಷ ರೂ.ಗಳು
೨.	ಯೋಜನೇತರ	೪೪,೪೯,೪೪	ಲಕ್ಷ ರೂ.ಗಳು
೩.	ವಿಶೇಷ ಘಟಕ ಯೋಜನೆ	೩೦೩೮೧.೭೫	ಲಕ್ಷ ರೂ.ಗಳು
೪.	ಗಿರಿಜನ ಉಪಯೋಜನೆ	೪೬೩೯.೬೯	ಲಕ್ಷ ರೂ.ಗಳು
	ಒಟ್ಟು	**೪೯೫೦೦.೧೦**	**ಲಕ್ಷ ರೂ.ಗಳು**

ಆ) ಹೌದು. ನಿಗದಿಪಡಿಸಿದ ಹಣದಲ್ಲಿ ಶೇಕಡ ೯೨.೭೮ ರಷ್ಟು ಖರ್ಚಾಗಿದೆ. ಆದರೆ ಕೆಲವೊಂದು ಹೊಸ ಯೋಜನೆಗಳ ಪ್ರಸ್ತಾವನೆಗಳಿಗೆ ಮಂಜೂರಾತಿ ನೀಡುವುದು ತಡವಾದ ಕಾರಣ ಹಾಗೂ ಆರ್ಥಿಕ ಮಿತಿ ನಿರ್ಬಂಧವಿದ್ದುದರಿಂದ ಪೂರ್ತಿ ಹಣ ಬಿಡುಗಡೆಯಾಗದ ಪ್ರಯುಕ್ತ ಕೆಲವು ಯೋಜನಾ ಕಾರ್ಯಕ್ರಮಗಳಡಿಯಲ್ಲಿ ಖರ್ಚು ಕಡಿಮೆಯಾಗಿರುತ್ತದೆ.

ವಿಜಾಪುರ ಪೌರ ಕಾರ್ಮಿಕರ ಬಗ್ಗೆ

೫೭೫ - ಶ್ರೀ ಬಸವನಗೌಡ ಪಾಟೀಲ್ (ಬಿಜಾಪುರ) : ಮಾನ್ಯ ನಗರಾಭಿವೃದ್ಧಿ, ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ನಗರಸಭೆಯಲ್ಲಿ ಇರುವ ಪೌರ ಕಾರ್ಮಿಕರ ಸಂಖ್ಯೆ ಎಷ್ಟು?

ಆ) ವಿಜಾಪುರ ನಗರಸಭೆಯಲ್ಲಿ ಕಸ ಗುಡಿಸುವವರು (ಸ್ವೀಪರ್) ಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಕೊರತೆ ನೀಗಲು ಸರ್ಕಾರ ಕೈಗೊಂಡು ಕ್ರಮಗಳು ಏನು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ, ಕಾಡಾ, ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು).

ಅ) ೨೯೦.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ವಿಜಾಪುರ ನಗರದ ಮನೆ ತೆರಿಗೆ ಕುರಿತು

೫೭೬ - ಶ್ರೀ ಬಸವನಗೌಡ ಪಾಟೀಲ್ (ವಿಜಾಪುರ) : ಮಾನ್ಯ ನಗರಾಭಿವೃದ್ಧಿ, ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?